# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 26

ಸದಸ್ಯರ ಹೆಸರು : ಡಾ॥ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 13.02.2023.

ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಶಕ್ತಿ ಕೇಂದ್ರ ವಿಧಾನಸೌಧಕ್ಕೆ ಅಳವಡಿಸಿದ್ದ ಭದ್ರತಾ ಸಲಕರಣೆಗಳು ಸ್ಥಗಿತಗೊಂಡು ಎರಡು ವರ್ಷಗಳಿಂದ ಕಾರ್ಯ ನಿರ್ವಹಿಸದೆ ನಿತ್ಯ ವಿಧಾನಸೌಧಕ್ಕೆ ಬರುವ ನೌಕರರು ಮತ್ತು ಸಾರ್ವಜನಿಕರನ್ನು ತಪಾಸಣೆ ಮಾಡದೇ ಪ್ರವೇಶ ಕಲ್ಪಿಸಲಾಗುತ್ತಿದೆ ಎಂದು ಗಂಭೀರ ವರದಿ ಪ್ರಕಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ವಿಧಾನಸೌಧ ಭದ್ರತಾ ವ್ಯವಸ್ಥೆಯ ಬಗ್ಗೆ ಕಾಲಕಾಲಕ್ಕೆ ಭದ್ರತಾ ವ್ಯವಸ್ಥೆಗಳ ತಪಸಾಣೆ (Security Audit) ಗಳನ್ನು ಕೈಗೊಳ್ಳಲಾಗುತ್ತಿದ್ದು, ಭದ್ರತೆಯ ಸಲುವಾಗಿ ಕೆಳಕಂಡ ಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.<br>1. ಎಲ್ಲಾ ಮುಖ್ಯದ್ವಾರಗಳಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಿ ವಿಧಾನಸೌಧ ಆವರಣ ಪ್ರವೇಶ ಮಾಡುವ ವಾಹನಗಳ / ವ್ಯಕ್ತಿಗಳನ್ನು (DFMD / HHMD) ಪೂರ್ಣ ತಪಾಸಣೆ ಮಾಡಿದ ಬಳಿಕವೇ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತಿದೆ.<br>2. ವಿಧಾನಸೌಧ / ವಿಕಾಸಸೌಧ ಕಟ್ಟಡಗಳ ಒಳ ಆವರಣಗಳಲ್ಲಿ ಅಳವಡಿಸಿರುವ ಬ್ಯಾಗೇಜ್ ಸ್ಕ್ಯಾನರ್ (Baggage SCanner) ಗಳು ದುರಸ್ಥಿಯಲ್ಲಿರುವುದರಿಂದ ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸಿ, (DFMD / HHMD) ಗಳನ್ನು ಬಳಸಿ ವ್ಯಕ್ತಿಗಳ / ವಸ್ತುಗಳ (Physical Frisking) ತಪಾಸಣೆ ನಡೆಸಲಾಗುತ್ತಿದೆ.<br>3. ಭದ್ರತೆಯ ದೃಷ್ಟಿಯಿಂದ ಪ್ರತಿ ದಿನ ಎರಡು ಬಾರಿ ಶ್ವಾನದಳದಿಂದ ಸಂಪೂರ್ಣ ಕಟ್ಟಡದ ಪರಿಶೀಲನೆ ಕಾರ್ಯ ಜಾರಿಯಲ್ಲಿರುತ್ತದೆ.<br>4. ವಿಧಾನಸೌಧ ಭದ್ರತಾ ಕರ್ತವ್ಯಕ್ಕೆ ನೇಮಕ ಮಾಡುವ ಸಿಬ್ಬಂದಿಗಳನ್ನು ಸರದಿಯ ಪ್ರಕಾರ "ಎ" "ಬಿ" ಮತ್ತು "ಸಿ" ಪಾಳಿಯಲ್ಲಿ ಕರ್ತವ್ಯಕ್ಕೆ ನೇಮಕ ಮಾಡಲಾಗುತ್ತಿದೆ. ಅಲ್ಲದೇ ಸಿಬ್ಬಂದಿಗಳ ಮೇಲ್ವಿಚಾರಣೆಗೆ ಹಿರಿಯ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.<br>5. ವಿಧಾನಸೌಧ ಭದ್ರೆತಾ ಕರ್ತವ್ಯಕ್ಕೆ ಸಿವಿಲ್ ಪೊಲೀಸ್ ಜೊತೆಗೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (KSISF) ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.<br>6. ವಿಧಾನಸೌಧ / ವಿಕಾಸಸೌಧ ಕಟ್ಟಡ, ಶಾಸಕರ ಭವನ, ಹೈಕೋರ್ಟ್ ಕಟ್ಟಡಗಳಲ್ಲಿ ಹೊಸದಾಗಿ ಬ್ಯಾಗೇಜ್ ಸ್ಕ್ಯಾನರ್‌ಗಳನ್ನು ಖರೀದಿಸಿ / ನಿರ್ವಹಣೆ ಮಾಡಲು ದಿನಾಂಕ 12.07.2022 ರಂದು ರೂ.5,74,00,000/- ಗಳ ಅನುದಾನವನ್ನು ಒದಗಿಸಲಾಗಿದ್ದು ಬ್ಯಾಗೇಜ್ ಸ್ಕ್ಯಾನರ್‌ಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>7. ವಿಧಾನಸೌಧ / ವಿಕಾಸಸೌಧ ಕಟ್ಟಡ, ಶಾಸಕರ ಭವನ, ಹೈಕೋರ್ಟ್ ಕಟ್ಟಡಗಳಲ್ಲಿ ಭದ್ರತೆಯ ದೃಷ್ಟಿಯಿಂದ ಹೊಸದಾಗಿ 25 DFMD ಅಳವಡಿಸಲು ಖರೀದಿ / ನಿರ್ವಹಣೆ ವೆಚ್ಚಕ್ಕಾಗಿ ದಿನಾಂಕ 12.07.2022 ರಂದು ರೂ.1,15,00,000/- ಗಳು ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

| | | |
|---|---|---|
| ಆ | ಬಂದಿದ್ದಲ್ಲಿ, ಈ ಭದ್ರತಾ ವೈಫಲ್ಯಕ್ಕೆ ಕಾರಣಗಳೇನು ಹಾಗೂ ಇದರ ಹೊಣೆಗಾರಿಕೆಯನ್ನು ಯಾರಿಗೆ ನೀಡಲಾಗಿದೆ? (ವಿವರ ನೀಡುವುದು). | ವಿಧಾನಸೌಧ / ವಿಕಾಸಸೌಧ ಕಟ್ಟಡಗಳಲ್ಲಿ ಯಾವುದೇ ಭದ್ರತಾ ವೈಫಲ್ಯಗಳು ಸಂಭವಿಸಿರುವುದಿಲ್ಲ.<br>1. ವಿಧಾನಸೌಧ / ವಿಕಾಸಸೌಧ ಕಟ್ಟಡಗಳ ಭದ್ರತೆಯ ಉಸ್ತುವಾರಿಗೆ ಒಬ್ಬರು ಡಿಸಿಪಿ ಮಟ್ಟದ ಅಧಿಕಾರಿಯ ಉಸ್ತುವಾರಿಯಲ್ಲಿ ಅಗತ್ಯಕ್ಕನುಗುಣವಾಗಿ ಅಧಿಕಾರಿ / ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ.<br>2. ತಾಂತ್ರಿಕ ಸಲಕರಣೆಗಳನ್ನು ಒದಗಿಸಲು ಅಗತ್ಯ ಅನುದಾನ ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಇ | ವಿಧಾನಸೌಧ, ವಿಕಾಸಸೌಧ ಹಾಗೂ ಇನ್ನಿತರ ಪ್ರಮುಖ ಸ್ಥಳಗಳಲ್ಲಿ ಭದ್ರತೆಗೆ ಹೆಚ್ಚು ಒತ್ತು ನೀಡುವುದು ಕಡ್ಡಾಯವಾಗಿದ್ದು, ಇದರಲ್ಲಿ ಉದಾಸೀನ ಹಾಗೂ ನಿರ್ಲಕ್ಷ್ಯ ತೋರದೆ ಹೆಚ್ಚಿನ ಭದ್ರತೆ ನೀಡುವ ವಿಚಾರದಲ್ಲಿ ಸರ್ಕಾರದ ಚಿಂತನೆ ಏನು ? (ವಿವರ ನೀಡುವುದು). | ವಿಧಾನಸೌಧ / ವಿಕಾಸಸೌಧ ಕಟ್ಟಡಗಳ ಭದ್ರತೆಯಲ್ಲಿ ಯಾವುದೇ ಉದಾಸೀನ / ನಿರ್ಲಕ್ಷ್ಯತೆ ವಹಿಸಿರುವುದಿಲ್ಲ. ಭದ್ರತೆಗೆ ಹೆಚ್ಚಿನ ಒತ್ತು ನೀಡಲಾಗಿರುತ್ತದೆ. |

ಹೆಚ್‌ಡಿ 16 ಪಿಸಿಇ 2023

(ಆರಗ ಜ್ಞಾನೇಂದ್ರ)
ಗೃಹ ಸಚಿವರು